ಅವನತ್ತ ನೋಡುತ್ತ ಆಕೆ ಅಂದಳು:

''ಅಬ್ದುಲ್ ಹಮೀದ್, ದಯವಿಟ್ಟು ನನ್ನ ದನಿ ಕೇಳು" ಎಂದು ಹಾಡುವುದರಲ್ಲಿದ್ದಳು. ಆದರೆ, ಹಮೀದನ ಕೆಂಗಣ್ಣು ಕಂಡು ಮೌನವಾದಳು. ಆತನ ಕೆಂಗಣ್ಣ ನೋಟ ಆಕೆ ಈವರೆಗೆ ಹೇಳಿದ್ದನ್ನು ಆತ ಕೇಳಿಸಿಕೊಂಡಿಲ್ಲ ಎಂಬಂತಿತ್ತು. ಅನಂತರ, ಹಮೀದ್, ''ಈ ವಿಷಯ ಬೇರೆ ಯಾರಿಗಾದರೂ ಹೇಳಿದ್ದೀಯಾ?" ಎಂದು ಕೇಳಿದ. ಸಯೀದ ಯಾರೊಂದಿಗೂ ಮಾತಾಡುವುದನ್ನು ಇಷ್ಟಪಟ್ಟಿರಲಿಲ್ಲ ಹಮೀದ್ ಬೆಳಗ್ಗೆ ಮನೆಬಿಟ್ಟು ಹೋದ ಸ್ವಲ್ಪ ಸಮಯಕ್ಕೆ ಹೀಗಾಯಿತೆಂದೂ ಆಗಿನಿಂದ ಒಂದು ನರಪಿಳ್ಳೆಯನ್ನೂ ತಾನು ಭೇಟಿಯಾಗಿಲ್ಲವೆಂದು ಗಂಡನಿಗೆ ತಿಳಿಸಿ ಹೇಳಿದಳು.

ಒಂದು ನಿಟ್ಟುಸಿರು ಬಿಟ್ಟಮೇಲೆ ಆತ, ''ಇದೆಲ್ಲ ಮರೆತುಬಿಡು! ಮಕ್ಕಳ ಬಳಿ ಈ ವಿಷಯದ ಕುರಿತು ತಪ್ಪಿಯೂ ಉಸಿರೆತ್ತಬೇಡ" ಎಂದು ಕಳಕಳಿಯಿಂದ ಕೇಳಿಕೊಂಡ.

ತಾನು ಹೇಳುವುದೆಲ್ಲ ನಿಜ, ತಾನು ಪ್ರಾಮಾಣಿಕಳೆಂದು ದೇವರಮೇಲೆ ಆಣೆ ಹಾಕಿದಾಗಲೂ ಹಮೀದ್ ನಂಬದಾದಾಗ ಆಕೆ ಕನಲಿದಳು. ಇದು ದೈವದ–ವಿಧಿಯ ಆಟವಾಗಿರಲಾರದು. ಏಕೆಂದರೆ, ಮದುವೆಯಾಗಿ ಈ ಮನೆಯ ಹೊಸಿಲು ತುಳಿದ ದಿನದಿಂದ ಇಲ್ಲಿಯವರೆಗೆ ಯಾರೊಬ್ಬರನ್ನೂ ಕಣ್ಣೆತ್ತಿ ನೋಡಿರಲಿಲ್ಲ. 'ನನ್ನ ಬುದ್ಧಿ ಸ್ತಿಮಿತದಲ್ಲಿದೆ' ಎಂದು ಹೇಳುವಾಗ ಆಕೆಯ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು.

ಸೋಫಾದ ಮೇಲೆ ಕುಳಿತ ಅಬ್ದುಲ್ ಹಮೀದ, ''ಸ್ವಲ್ಪ ಸಕ್ಕರೆ ಕಡಿಮೆ ಹಾಕಿ ಕಾಫಿ ಮಾಡಿಕೊಂಡು ಬಾ'' ಎಂದು ಆಕೆಗೆ ಹೇಳಿದ. ಮೆದು ಚಪ್ಪಲಿಯ ಉಂಗುಷ್ಠಕ್ಕೆ ಸಿಲುಕಿ ಆಕೆಯ ಕಾಲು ಜಾರಿದಾಗ ನಿಜಕ್ಕೂ ಅವಳ ಬಗ್ಗೆ ಮರುಕಪಟ್ಟು ಹೇಳಿದ:

''ನೋಡು ಸಯೀದ, ನಿನಗೆ ಈಗಾಗಲೆ ನಲ್ವತ್ತಾಯಿತು. ನಾಕು ಮಕ್ಕಳಿವೆ. ಇಂಥ ತಲೆಹರಟೆ ನಿನಗೆ ಮರ್ಯಾದೆ ತರೋಲ್ಲ. ಮಕ್ಕಳೆಲ್ಲ ಸೇರಿ ಆಡಿಕೊಂಡು ನಗುವ ವಸ್ತುವಾಗುತ್ತೀಯ. ಸೂಕ್ಷ್ಮ ಮನಸ್ಸಿನವರು ಈ ವಿಷಯ ಕೇಳಿದಾಗ ಏನೆಂದಾರು? ಸ್ವಲ್ಪ ಯೋಚಿಸು. ನೀನು ಹೇಳೋದೆಲ್ಲ ನಿಜ ಅಂತಲೇ ಇಟ್ಟುಕೊಳ್ಳೋಣ. ಆಮೇಲೆ ಏನಾದೀತು? ನೀನೇನು ವಿದೂಷಿಯಾಗುವ ಬಯಕೆ ಹೊಂದಿದ್ದೀಯ? ಎಂತಹ ಕಂತೆಪುರಾಣ ತೆಗೆದುಕೊಂಡು ಕೂತಿದ್ದೀಯ!"

ಹಮೀದ್ ಒಮ್ಮೆ ನಿರಾಳವಾಗಿ, ಜೋರಾಗಿ ನಕ್ಕ. ಆತ ಊಹಿಸಿದ್ದಕ್ಕಿಂತ ಇದು ಅತಿ ಚಿಲ್ಲರೆಯ ವಿಷಯವಾಗಿತ್ತು, ಎನ್ನುವ ಧೋರಣೆ ಆ ನಗುವಿನಲ್ಲಿತ್ತು! ರಸಿಕತೆ ಬೆರೆತ ವಿನೋದದಲ್ಲಿ ಆಕೆಯ ಬೆನ್ನಿಗೊಂದು ಏಟು ಹಾಕಿದಾತ ಮೆತ್ತಗೆ ಉಸುರಿದ:

''ಈ ಕಾಫಿ ಮುಗಿಸಿದ ಮೇಲೆ ಸ್ವಲ್ಪ ಹೊತ್ತು ಹಾಸಿಗೆಯಲ್ಲಿ ಒರಗೋಣ!"

ಹೊತ್ತು ಇಳಿದಂತೆ ಎಲ್ಲ ಮಾಮೂಲಿನಂತಾಯ್ತು. ಬೆಳಗ್ಗೆ ನಡೆದದ್ದನ್ನು ಸಯೀದಾ ಮರೆತೇಬಿಟ್ಟಳು. ಮನೆಯ ಮಧ್ಯಾಹ್ನದ ಕೆಲಸಗಳಲ್ಲಿ ಅವಳು ನಿರತಳಾದಳು: ಬಟ್ಟೆಗಳನ್ನು ಒಗೆಯಲು ಹಾಕಿದಳು, ಓದುತ್ತ ಕೂತ ಮಕ್ಕಳಿಗಾಗಿ ಚಹಾ ಮಾಡಿಕೊಟ್ಟಳು. ಟಿ.ವಿ.ಯಲ್ಲಿ ಬರುತ್ತಿದ್ದ ಅಂತ್ಯಾಕ್ಷರಿ ನೋಡಿದಳು. ಸಂಜೆ ತಿರುಗಾಟಕ್ಕೆಂದು ಕಾಫಿಹೌಸಿಗೆ ಹೋಗಿದ್ದ ಅಬ್ದುಲ್ ಹಮೀದ್ ಮರಳಿದ ಮೇಲೆ ಅವನಿಗೆ ಮಕ್ಕಳಿಗೆ ಊಟ ಹಾಕಿದಳು. ಮಕ್ಕಳೊಡನೆ ರೇಗುತ್ತ, ನಗುತ್ತ ಹಮೀದ್ ಊಟ ಮುಗಿಸಿದ.

ರಾತ್ರಿ, ಅಬ್ದುಲ್ ಹಮೀದ್ ನಿದ್ರಿಸಿದ ಅನಂತರ, ತಾನು ಇದ್ದಕ್ಕಿದ್ದಂತೆ ಕಂಡುಕೊಂಡ, ತನ್ನ ಮನಸಿನಾಳದಲ್ಲಿ ತನ್ನನ್ನು ದಹಿಸುತ್ತಿರುವ ಆ ಸುಕೋಮಲ ಮಧುರ ದನಿಯನ್ನು ಏನು ಮಾಡಬೇಕೆಂದು ಅತ್ಯಂತ ವ್ಯಗ್ರಳಾಗಿ ಸಯೀದಾ ಚಿಂತಿಸಿದಳು. ಸಿರಿಯ ಭಂಡಾರದ ಮೇಲೆ ಮುಗ್ಗರಿಸಿ ಬಿದ್ದಂತಾಗಿತ್ತು ಆಕೆಯ ಸ್ಥಿತಿ.

ಸುಮಾರು ಹೊತ್ತು ಯೋಚಿಸಿದ ಅನಂತರ ಆಕೆ ಒಂದು ತಾರ್ಕಿಕ ತೀರ್ಮಾನಕ್ಕೆ ಬಂದಳು. ''ಮಧುರವಾದ ದನಿ ಇರುವುದೇ ಹಾಡಲಿಕ್ಕೆ!" ಇಡೀ ಲೋಕವೇ ತನ್ನ ಹಾಡನ್ನು ಆಲಿಸುವಂತೆ ತಾನೇಕೆ ಹಾಡಬಾರದು? ಹಾಗೆ ಕೇಳುವುದು ಅತ್ಯಂತ ಸಹಜವಾಗಿರಬೇಕು. ಜನ ಯಾಕೆ ತನ್ನ ಸುಕೋಮಲ ಶಾರೀರವನ್ನು ವಯಸ್ಸು, ಗಂಡುಹೆಣ್ಣು ಅನ್ನುವುದನ್ನು ಮರೆತು ಆಸ್ವಾದಿಸಬಾರದು? ಈ ತೀರ್ಮಾನ